‘ಅವರು ಎಷ್ಟು ಸಂತೋಷದಿಂದ ಇರುತ್ತಾರೆ. ಎಲ್ಲರಿಗೂ ಅವರಿದ್ದರೆ ಇಷ್ಟ. ನೀವೊಬ್ಬರೇ ಹೀಗೆ ಆಡುವುದು...’

‘ನನಗೂ ಇಷ್ಟ. ಆದರೆ ಗಲಾಟೆ...’

ನನ್ನನ್ನು ನನ್ನ ಮಾಮೂಲು ಜಾಗದಲ್ಲಿ ಕೂಡಿಸಿ ಊಟ ತರಲು ಹೋದಳು ಲಲಿತ.

‘ಆಮೇಲೆ ತಾಯಿಗೆ ತುಂಬಾ ಕೋಪ ಬಂತು. ಅದ್ಯಾರು ಗೋಪಾಲ?’ ಎಂದು ಪ್ರಶ್ನಿಸಿದಳು.

ಆಗ ಮಗ ಹೇಳಿದ, ಅವನೇ ಅಮ್ಮ... ನನ್ನ ಸ್ನೇಹಿತ. ನೀನೇ ಹೇಳಿದ್ಯಲ್ಲಾ. ಕಾಡಿನಲ್ಲಿ ಹೋಗಲು ಹೆದರಬೇಡ. ಹೆದರಿಕೆಯಾದರೆ, ಗೋಪಾಲ ಎಂದು ಕರಿ ಎಂದಿದ್ಯಲ್ಲಾ.

ಅವನೇ ಗೋಪಾಲ. ನಾನು ಕರೆದರೆ ಬರ್ತಾನೆ. ಶಾಲೆವರೆಗೂ ನನ್ನ ಬಿಟ್ಟು ಹೋಗ್ತಾನೆ. ಹಿಂತಿರುಗಿ ಮನೆಗೆ ಬರುವಾಗಲೂ ಅಷ್ಟೇ. ಕರೆದ ತಕ್ಷಣ ಬರುತ್ತಾನೆ. ಕಥೆ ಹೇಳುತ್ತಾನೆ. ಹಾಡುತ್ತಾನೆ. ಕೊಳಲು ನುಡಿಸುತ್ತಾನೆ. ನಗುತ್ತಾನೆ, ನಗಿಸುತ್ತಾನೆ...’ ಸರೋಜ ಗಟ್ಟಿ ದನಿಯಲ್ಲಿ ಹೇಳುತ್ತಿದ್ದರು.

‘ಸಾಕ್ಷಾತ್ ಗೋಪಾಲಕೃಷ್ಣನೇ ಅವನಲ್ಲವೇ’ ಸಾವಿತ್ರಮ್ಮ ಕುಳಿತಲ್ಲೇ ಕೈಮುಗಿದರು.

ಎಲ್ಲರ ಮುಖದ ಮೇಲೆ ನಗು...

‘ಯಾಕ್ರಿ ಲಕ್ಷ್ಮಣ್. ನಾನು ಹೇಳಿದ ಕಥೆ ನಿಮಗೆ ಇಷ್ಟವಾಗಲಿಲ್ಲವೇ?’ ಸರೋಜ ಪ್ರಶ್ನಿಸಿದಾಗ ಲಕ್ಷ್ಮಣ್ ತಲೆ ಆಡಿಸಿದರು.

‘ಇಷ್ಟ ಆಯ್ತು. ಅಜ್ಜಿ ಹಾಗೂ ಗಂಟೆ ಕಥೆ ಕೂಡ ಇಷ್ಟವಾಗಿತ್ತು. ಎಲ್ಲಾ ನಮ್ಮಮ್ಮ ಹೇಳುತ್ತಿದ್ದ ಕಥೆಗಳು. ನಾನು ನನ್ನ ಮಕ್ಕಳಿಗೆ ಹೇಳುತ್ತಿದ್ದೆ. ಮೊಮ್ಮಕ್ಕಳಿಗೂ ಹೇಳುವ ಆಸೆ. ಆದರೆ ಮಗ ಇಲ್ಲಿಗೆ ಕರೆದುಕೊಂಡು ಬಂದು ಸೇರಿಸಿಬಿಟ್ಟ. ಮೆಲ್ಲನೆ ಹೇಳಿದರಾತ.

‘ನಮಗೇ ಹೇಳಿ ಕಥೆಗಳ್ನ ಅಷ್ಟೇ. ತುಂಬು ನಗೆ. ಎಷ್ಟು ಚೆಲುವೆ ಈ ಸರೋಜ... ಚಿಕ್ಕವಳೇನಲ್ಲ ಎಪ್ಪತ್ತು ದಾಟಿದೆ ವಯಸ್ಸು. ಆದರೆ ಮಾತು, ನಗು, ನಡೆ ಎಲ್ಲಾ ಚಿಕ್ಕವಳಂತೆ. ತಲೆ ಕೂದಲಿಗೆ ಬಣ್ಣ, ಚೆಂದದ ಸೀರೆಗಳು, ಸೆರಗನ್ನು ಪಿನ್ ಮಾಡ್ಕೊಂಡು ಉಟ್ಟು ದಡಬಡ ಓಡಾಡುತ್ತಾ ನಮಗೆ ಸಹಾಯ ಮಾಡಲು ಇರುವವರಿಗೆ ಸಹಾಯ ಮಾಡುತ್ತಾ.

‘ಊಟ ಮಾಡಿ. ಇವತ್ತು ಕಾವೇರಿಯವರದು ಹುಟ್ಟಿದ ಹಬ್ಬ. ಪಾಯಸ ನಾನೇ ಮಾಡಿದ್ದು...’ ನನ್ನ ಬಳಿ ಬಂದರು ಸರೋಜ.

‘ಅಡುಗೆಯವರು ಬಂದಿಲ್ಲವೇ?’

‘ಬಂದಿದ್ದಾರೆ, ಆದರೆ ಇದು ನಮ್ಮ ಮಲೆನಾಡ ಕಡೆಯ ಪಾಯಸ. ಹಲಸಿನ ಹಣ್ಣಿನ ಪಾಯಸ’.

‘ಹೂಂ’

‘ತಿನ್ನಿರಲ್ಲ...’

‘ಹೂಂ’

ಈ ವೃದ್ಧಾಶ್ರಮಕ್ಕೆ ನಾನು ಬಂದು ಅದೆಷ್ಟೋ ವರ್ಷಗಳಾದವು ನೆನಪಿಲ್ಲ. ಬಂದಂದಿನಿಂದ ಈ ಲಲಿತೆ ನನ್ನ ಬೇಕು, ಬೇಡ ನೋಡಿಕೊಳ್ಳುತ್ತಾಳೆ. ಮಗಳು, ಮಗ ಇಬ್ಬರೂ ಫೋನ್ ಮಾಡುತ್ತಾರೆ, ಮಾತಾಡುತ್ತಾರೆ, ಬರ್ತೀವಿ, ರಜಾ ಇಲ್ಲ, ಮಕ್ಕಳು ಓದು, ಪರೀಕ್ಷೆ ಏನೋ ಹೇಳುತ್ತಾರೆ. ಈ ಮರೆವು ಒಂದು ವರ. ಹೀಗೆ ಕೇಳಿ ಹಾಗೇ ಮರೆತು ಬೇಕೆಂದಾಗ ನೆನಪುಗಳಲ್ಲಿ ಮುಳುಗಿ... ಇಲ್ಲಿ ಈಗಿರುವವರ ಹೆಸರುಗಳೂ ನೆನಪಲ್ಲಿ ಇರುವುದಿಲ್ಲ. ಮುಖಕ್ಕೆ ಹೆಸರು ಹೊಂದುವುದಿಲ್ಲ.. ಯಾರನ್ನೋ ಏನೋ ಕೇಳಿ. ಏನೋ ಹೇಳಿ ಅಭಾಸವಾಗುವುದರ ಬದಲು. ನನ್ನ ಪಾಡಿಗೆ ನಾನು, ಇರುವುದೇ ಹಿತ...

ಮೊನ್ನೆ ಮೊನ್ನೆ ಯಾರೋ ಬಂದು ಮಾತನಾಡಿಸುತ್ತೇವೆ, ಸಂದರ್ಶನ ಮಾಡುತ್ತೇವೆ. ನಮ್ಮ ನಾಡಿನ ಹಿರಿಯ ಲೇಖಕಿ ಇವರು. ಸರಕಾರ ಇವರಿಗೆ ಏನು ಮಾಡುತ್ತಿದೆ ಎಂದೆಲ್ಲಾ ಮಾತನಾಡಿ, ನಾನು ಬೇರೆ, ಮಕ್ಕಳು ಅವರ ಜೀವನ ಅವರು ಬದುಕುತ್ತಿದ್ದಾರೆ.. ನಾನು ನನ್ನದು... ಎಂದು ಹೇಳಿ... ಅದು ಪ್ರಚಾರ ಪಡೆದು, ಮಗಳು ಕರೆ ಮಾಡಿ ಬೈದು... ಅದೇ ಒಂದು ಕಥೆ... ಬರೆಯಲಾರದ ಕಥೆ.

‘ನಿಮ್ಮನ್ನು ಏನೆಂದು ಕರೆಯಬೇಕು. ಅಮ್ಮ, ಮೇಡಂ. ಎಲ್ಲಾ ಬೇಡ. ಅಕ್ಕ ಅನ್ನಲೇ?’ ಎಂದು ಆತ್ಮೀಯಳಾಗಲು ಪ್ರಯತ್ನಿಸಿದ್ದು ಈ ಸರೋಜಾನೇ.



ಬೇರೆಯವರೆಲ್ಲಾ ನನ್ನ ತಂಟೆಗೆ ಬರುತ್ತಿರಲಿಲ್ಲ.

‘ಅಕ್ಕಾ’

‘ಹಾಂ... ಪಾಯಸ ಚೆನ್ನಾಗಿದೆ...’

‘ಥ್ಯಾಂಕ್ಸ್ ಇಲ್ಲಿ ಎಲ್ಲಾ ನಿಮ್ಮನ್ನು ಪದ್ಮಾವತಿ ಎನ್ನುತ್ತಾರೆ. ನಾನೂ ಅದೇ ನಿಮ್ಮ ಹೆಸರು ಅಂದುಕೊಂಡಿದ್ದೆ...’

‘ನಾನು ಪದ್ಮಾವತಿಯೇ...’

‘ಲಲಿತಾ... ಊಟ ಆಯ್ತು ನನ್ನದು...’

‘ಬರ್ತಾರೆ... ಅವರು ಊಟ ಮಾಡುತ್ತಿದ್ದಾರೆ. ಮೊನ್ನೆ ಸಂದರ್ಶನ ಮಾಡಿದ್ರಲ್ಲಾ ನಿಮ್ಮದು. ಬೇರೆ ಹೆಸರು ಹೇಳಿದ್ರು. ತಾವರೆದಳ. ಆ ಲೇಖಕಿ ನಿಜವಾಗಿ ನೀವೇನಾ?’

‘ಹೂಂ’

‘ನಾನು ಓದಿದ್ದೇನೆ. ‘ತಾವರೆದಳ’ ಕಾವ್ಯನಾಮ ಅಲ್ಲವೇ? ತುಂಬಾ ಚೆನ್ನಾಗಿ ಬರೆಯುತ್ತೀರಿ... ಅದೆಷ್ಟೊಂದು ಕಥೆ, ಕಾದಂಬರಿ ಬರೆದಿದ್ದೀರಿ... ಈ ಸಂದರ್ಶನ ನೋಡುವವರೆಗೂ ಅವರೇ ನೀವು ಎಂದು ಗೊತ್ತೇ ಇರಲಿಲ್ಲ...’

‘ನಾನು ಮಲಗಬೇಕು.’

‘ನನ್ನ ಮಗಳು ನಿಮ್ಮ ದೊಡ್ಡ ಅಭಿಮಾನಿ. ನನ್ನ ಸೊಸೆ ಕೂಡ. ನಿಮ್ಮ ಅಭಿಮಾನಿ...’

‘ನಿಮ್ಮ ಮಗಳಾ?’

‘ಹೂಂ.. ಕಲ್ಯಾಣಿ ಅಂತ... ಡೆನ್ವರ್‌ನಲ್ಲಿ ಇದ್ದಾಳೆ’

‘ಓ...’ ನನಗೆ ಕರೆ ಮಾಡಿದವಳ ಹೆಸರು ಕಲ್ಯಾಣಿ ಅಂತಲ್ಲವೇ...?

‘ಇಬ್ಬರು ಗಂಡು ಮಕ್ಕಳು, ಇವಳೊಬ್ಬಳು ಮಗಳು ನನಗೆ. ಆರು ಮಂದಿ ಮೊಮ್ಮಕ್ಕಳು... ಎಲ್ಲರೂ ಅವರವರ ಮೂಗಿನ ನೇರಕ್ಕೆ ಬದುಕುತ್ತಾರೆ. ಎಲ್ಲಿದ್ದರೂ ತೊಡರು ನನಗೆ. ಶಿವಮೊಗ್ಗದಲ್ಲಿ ನನಗೆ ಬೇಕಾದ ಹಾಗೆ ಇದ್ದೆ ನಾನು. ಮಕ್ಕಳು ಜಾಣರು. ಓದಿ ಅವರವರ ಬದುಕು ಕಟ್ಟಿಕೊಂಡರು. ಮಗನ ಮಗಳಿಗೆ ಮದುವೆಯಾಗಿದೆ. ನನ್ನ ಮಕ್ಕಳೇ ಹಿರಿಯರಾಗಿದ್ದಾರೆ. ಜೊತೆಗೆ ಬದುಕುವುದು ಬಲು ಕಷ್ಟ. ನನಗೂ ಅಷ್ಟೇ, ಅವರಿಗೂ ಅಷ್ಟೇ... ಶಿವಮೊಗ್ಗದ ಮನೆ, ಜಮೀನು ಎಲ್ಲ ಮಾರಿದ್ದಾಯಿತು. ಅಲ್ಲಿ ಒಂಟಿಯಾಗಿ ಕೂತು ಮಾಡುವುದೇನು? ಮಕ್ಕಳ ಮನೆಯಲ್ಲೂ ಒಂಟಿಯೇ. ಆಳವಾಗಿ ಯೋಚಿಸಿದರೆ ಎಲ್ಲರೂ ಒಂಟಿಯೇ. ಗಂಡ ಹೆಂಡತಿ ಅಂತಿದ್ದರೂ, ಎಲ್ಲಾ ಅವಶ್ಯಕತೆಯಷ್ಟೇ. ನಮ್ಮ ಯಜಮಾನರು ನಾಲ್ಕು ವರ್ಷ ಹಾಸಿಗೆ ಹಿಡಿದಿದ್ದರು. ಅದೆಷ್ಟು ಸೇವೆ ಮಾಡಿದ್ದು ಅವರಿಗೆ. ನಾನು ಒಂದು ಗಳಿಗೆ ಕೂತರೆ ಸಂಕಟಪಡೋರು. ನೀರು ಕೊಡು, ಕಾಫಿ ಕೊಡು, ಟಿ.ವಿ. ಹಾಕು ಎಂದು ಎಬ್ಬಿಸೋರು... ನಾನು ಹೋಗಿ ಬಿಟ್ಟರೆ... ನಿನ್ನದು.. ಹೇಗೆ? ನಿನ್ನದೇ ಯೋಚನೆ ನನಗೆ’ ಅನ್ನೋರು.

‘ನನ್ನ ಯೋಚನೆ ಬೇಡ... ಹೇಗೋ ಆಗುತ್ತೆ.. ನೀವು ನಿಮ್ಮದು ಯೋಚನೆ ಮಾಡಿ. ನೀವು ನರಳೋದು ನೋಡಲಾರೆ...’ ಎಂದು ಬಿಟ್ಟೆ ಒಮ್ಮೆ ಹಾಗೆ ಅನ್ನಬಾರದಿತ್ತು. ಹೋಗಿ ಬಿಟ್ಟರು! ಮಕ್ಕಳು, ಜವಾಬ್ದಾರಿ ಎಂದು ನೋಡಿಕೊಂಡರೂ ಕಷ್ಟವೇ. ನನ್ನ ಪಾಡಿಗೆ ನಾನು. ಬೇಕೆಂದಾಗ ಎಲ್ಲರೊಡನೆ ಮಾತು, ನಗು, ಹರಟೆ. ಬೇಡವೆಂದಾಗ.. ನಿದ್ರೆ... ಇಲ್ಲಿ ಈಗ ನಿಜವಾಗಿ ಖುಷಿಯಾಗಿದ್ದೇನೆ. ಮಕ್ಕಳಿಗೆ ಹೇಳೊಲ್ಲ ಅಷ್ಟೇ. ಅಷ್ಟಾಗಿ ಬೇಕೆಂದರೆ ಹೋಗಿ ಮಗ, ಸೊಸೆ, ಮೊಮ್ಮಕ್ಕಳನ್ನು ನೋಡಿಕೊಂಡು ಬರುತ್ತೇನೆ. ಇಲ್ಲಿರುವವರದೆಲ್ಲಾ ಒಂದೊಂದು ಕಥೆ. ನೀವು ಬರೆಯಬೇಕು. ನನ್ನದೂ ಬರೆಯಬೇಕು. ಬಿಟ್ಟರೆ ಸುಖ. ಬಿಟ್ಟು ಸುಖವಾಗಿದ್ದೇನೆ. ಹುಷಾರು ತಪ್ಪಿದರೆ ಆಸ್ಪತ್ರೆ... ಹಾಗೆ ಹೊರಟರೆ ಸ್ವರ್ಗ, ನನ್ನ ಕಥೆ ಬರೀತೀರಾ?

‘ನಿಮ್ಮ ಮಗಳ ಹೆಸರೇನಂದ್ರಿ?’

‘ಕಲ್ಯಾಣಿ... ಡೆನ್ವರ್‌ನಲ್ಲಿ ಇದ್ದಾಳೆ.. ನಿಮ್ಮ ಅಭಿಮಾನಿ ಅವಳು’.

‘ಹೂಂ’

‘ಕಥೆ ಬರೀತೀರಿ?’ ದೃಢ ಕಂಗಳು ಆಕೆಯದು.

‘ಕೈ ನಡುಗುತ್ತೆ’ ಕೆಲವು ಕಥೆಗಳು ಬರೆಯದಿರುವುದೇ ಒಳಿತು.. ಲಲಿತಾ.. ಲಲಿತಾ.. ಊಟ ಆಯ್ತಾ?

ಪ್ರತಿಕ್ರಿಯಿಸಿ: **feedback@sudha.co.in**